**1 ನೇ ಹೆಚ್ಚುವರಿ  ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸತ್ರ ಮೊಕದ್ದಮೆ  ನಂಃ 54/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | - ವಿಜಯ ಕುಮಾರ | | ಪಿಡಬ್ಲೂ - 05 |
| ತಂದೆಯ ಹೆಸರು | - ರುದ್ರಯ್ಯ | | ಸಿಡಬ್ಲೂ - 06 |
| ವಯಸ್ಸು | - 49 ವರ್ಷ | | |
| ಉದ್ಯೋಗ | - ವ್ಯವಸಾಯ | | |
| ವಾಸ ಸ್ಥಳ | - ತೆರಣ್ಯ, ಹೊಳೆನರಸಿಪುರ | | |

ದಿನಾಂಕಃ 03.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

**ಮುಖ್ಯ ವಿಚಾರಣೆ :  ಸರ್ಕಾರಿ ಅಭಿಯೋಜಕರಿಂದ-**

1. ಪ್ರಾಸಾ.1 ಗೊತ್ತು. ಮೃತ ಶಾರದ ಗೊತ್ತು. ಚಾಸಾ.7 ಗೊತ್ತು. ನಾನು ಮೂಲತಃ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ತೆರಣ್ಯ ಗ್ರಾಮದವನು. ಅಲ್ಲಿ ನಾನು ಅಲ್ಲಿ ವ್ಯವಸಾಯ ಮಾಡಿಕೊಂಡಿದ್ದೇನೆ, ಸಾಮಾಜಿಕ ಕಾರ್ಯಕರ್ತನಾಗಿದ್ದೇನೆ ಮತ್ತು

ವಾರದಲ್ಲಿ 3 ರಿಂದ 4 ದಿನ ಹಾಸನಕ್ಕೆ ಕೆಲಸದ ಮೇರೆಗೆ ಹೋಗುತ್ತೇನೆ.

2. ಈಗ್ಗೆ 8 ರಿಂದ 9 ತಿಂಗಳುಗಳ ಹಿಂದೆ ದಿಃ 21-01-2025 ರಂದು ಫ್ರಾಸಾ.4 ವರುಣ್ ಕುಮಾರರವರು ನನಗೆ ಫೋನ್ ಮಾಡಿ ತಮ್ಮ ಕಡೆಯವರೊಬ್ಬರು ಹಾಸನದ ಹಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಅವರ ಶವವನ್ನು ಅಲ್ಲಿಂದ ತೆಗೆದುಕೊಂಡು ಬರಲು ಸಹಾಯ ಮಾಡಿ ಅವರು ಬಡವರಿದ್ದಾರೆ ಎಂದು ನನಗೆ ಕೇಳಿದರು. ಫ್ರಾಸಾ.4 ರವರು ನನಗೆ ಫೋನ್ ಮಾಡಿದಾಗ ನಾನು ಹಾಸನದಲ್ಲಿದ್ದೆನು. ಹಾಗಾಗಿ ಫೋನ್ ಬಂದ ಬಳಿಕ ನಾನು ಹಾಸನದ ಹಿಮ್ಸ್ ಆಸ್ಪತ್ರೆಯ ಶವಗಾರಕ್ಕೆ ಹೋದೆನು. ಅಲ್ಲಿ ಒಬ್ಬ ಮಹಿಳೆಯ ಶವವನ್ನು ನೋಡಿ ಶವಗಾರದಿಂದ ಆಚೆ ಬಂದಾಗ ಅಲ್ಲಿದ್ದ 4 ರಿಂದ 5 ಜನರನ್ನು ಕುರಿತು, ಸದರಿ ಮಹಿಳೆಗೆ ಸಂಬಂಧಿಸಿದವರು ಯಾರು ಎಂದು ಕೇಳಿದೆನು. ಆಗ ಅಲ್ಲಿದ್ದವರ ಪೈಕಿ ಸಿದ್ದಮ್ಮ ಎನ್ನುವವರು ತಾನು ಮೃತ ಮಹಿಳೆಯ ತಾಯಿ ಎಂದು ಹೇಳಿ ಮೃತ ಮಹಿಳೆಯ ಹೆಸರು ಶಾರದಮ್ಮ ಎಂದು ತಿಳಿಸಿದರು.

3. ಆಗ ನಾನು ಫ್ರಾಸಾ.1 ರವರನ್ನು ಕುರಿತು ಏನಾಯಿತು ಎಂದು ವಿಚಾರಿಸಿದಾಗ ಅವರು, ಶಾರದ ತನ್ನ ಮಗಳೆಂದು, ಗಾರೆ ಕೆಲಸ ಮಾಡುವ ಮಂಜು ತನ್ನ ಅಳಿಯನೆಂದು, ಇದೇ ವರ್ಷ ಸಂಕ್ರಾಂತಿ ಹಬ್ಬದಂದು ಆಕೆ ತುಂಬು ಗರ್ಭಿಣಿಯಾಗಿದ್ದ ತನ್ನ ಮಗಳೊಂದಿಗೆ ಮನೆಯಲ್ಲಿದ್ದಾಗ ಆರೋಪಿ ಮದ್ಯವನ್ನು ಸೇವಿಸಿ ಬಂದು ಊಟವನ್ನು ಕೊಡುವಂತೆ ಕೇಳಿದಾಗ ಶಾರದ ತನಗೆ ಹುಷಾರಿಲ್ಲವೆಂದು ಹೇಳಿದಾಗ, ಆರೋಪಿ ಶಾರದಳ ಕೂದಲನ್ನು ಹಿಡಿದುಕೊಂಡು ಎಳೆದಾಡಿ ಗೋಡೆಗೆ ಬಡ್ಡಿದಿದ್ದಾಗಿ, ಕಾಲಿನಿಂದ ಆಕೆಯ ಹೊಟ್ಟೆಗೆ ಒದ್ದು ನೋವುಂಟು ಮಾಡಿದ್ದಾಗಿ, ಆಗ ಶಾರದ

ಕುಸಿದು ಬಿದ್ದಿದ್ದಾಗಿ, ಮಾರನೆ ದಿನ ಆಕೆಯನ್ನು ತಾನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ, ಅಲ್ಲಿ ವೈದ್ಯರು ಆಕೆಯನ್ನು ಪರೀಕ್ಷಿಸಿ ಆಕೆಗೆ ಸಿವಿಯರ್ ಆಗಿದೆ ಎಂದು ಹೇಳಿ ಹಾಸನದ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದರಿಂದ ಅವರು ಆಕೆಯನ್ನು ಹಾಸನದ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾಗಿ, ಅಲ್ಲಿ ವೈದ್ಯರು ಶಾರದಳಿಗೆ ಅಪರೇಷನ್ ಮಾಡಿ ಆಕೆಯ ಗರ್ಭದಿಂದ ಗಂಡು ಮಗುವನ್ನು ಹೊರ ತೆಗೆದಿದ್ದಾಗಿ, ಶಾರದಳನ್ನು ಐ.ಸಿ.ಯು ನಲ್ಲೇ ಇಟ್ಟಿದ್ದಾಗಿ, ಆದಾದ 3 ರಿಂದ 4 ದಿನಗಳ ಬಳಿಕ ಆಕೆ ಮೃತಪಟ್ಟಿದ್ದಾಗಿ ತಿಳಿಸಿದರು.

4. ನಂತರ ಚಿಕ್ಕಮಗಳೂರು ಪೊಲೀಸರು ಹಿಮ್ಸ್ ಆಸ್ಪತ್ರೆಯ ಶವಗಾರಕ್ಕೆ ಬಂದು ನನ್ನನ್ನು ವಿಚಾರಿಸಿದರು. ಆಗ ನಾನು ಅವರಿಗೆ ಮೇಲೆ ಹೇಳಿದಂತೆ ನನಗೆ ತಿಳಿದುಬಂದ ವಿಚಾರಗಳನ್ನು ಹೇಳಿದೆನು. ನಾನು ಹೇಳಿದ್ದನ್ನು ಅವರು ಬರೆದುಕೊಂಡರು. ಆರೋಪಿ ಕುಡಿದು ಬಂದು ತುಂಬು ಗರ್ಭಿಣಿಯಾಗಿದ್ದ ಶಾರದಳ ಹೊಟ್ಟೆಗೆ ಒದ್ದು ಆಕೆಯ ಕೂದಲನ್ನು ಹಿಡಿದು ಎಳೆದಾಡಿ ಗೋಡೆಗೆ ತಲೆಯನ್ನು ಗುದ್ದಿಸಿದ್ದರಿಂದ ಆಕೆ ಮೃತಪಪಟ್ಟಿದ್ದಳು ಎಂದು ನನಗೆ ಫ್ರಾಸಾ.1 ರವರಿಂದ ತಿಳಿದ ವಿಚಾರವನ್ನು ನಾನು ಪೊಲೀಸರಿಗೆ ಹೇಳಿದ್ದೇನೆ. ಆ ಸಮಯದಲ್ಲಿ ಹಾಸನದ ತಹಸೀಲ್ದಾರರವರು, ಸಿಡಿಪಿಓ ರವರು ಇದ್ದರು. ಸಾಕ್ಷಿಯು ಈಗಾಗಲೇ ನಿಪಿ.5 ರಿಂದ 8 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳಲ್ಲಿ ನಾನು ಮೇಲೆ ಹೇಳಿದಂತೆ ಹಾಸನದ ಹಿಮ್ಸ್ ಆಸ್ಪತ್ರೆಯ ಶವಗಾರದಲ್ಲಿ ನೋಡಿದ ಶಾರದಳ ಶವ ಕಂಡುಬರುವುದಾಗಿ ನುಡಿದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

5. ಹಾಸನದ ತಹಸೀಲ್ದಾರ್ ರವರು ಹಿಮ್ಸ್ ಆಸ್ಪತ್ರೆಯ ಶವಗಾರದಲ್ಲಿ ಶಾರದಳ ಶವ ಪರೀಕ್ಷೆಯನ್ನು ನಡೆಸುವ ಸಮಯಲ್ಲಿ ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳನ್ನು ತಿಳಿಸಿ ಅವರಿಗೆ ಹೇಳಿಕೆ ನೀಡಿದ್ದೀರಿ ಎಂದರೆ ಸಾಕ್ಷಿ ತಹಸೀಲ್ದಾರ್, ಪೊಲೀಸರು ಮತ್ತು ಸಿಡಿಪಿಓ ರವರು ಇದ್ದರು, ಅವರ ಸಮಕ್ಷಮ ನಾನು ಹೇಳಿಕೆ ನೀಡಿದ್ದೇನೆ ಎನ್ನುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಜಿ.ಎಸ್.ಎಸ್. ವಕೀಲರಿಂದಃ –</u>

6. ನನಗೆ ಫ್ರಾಸಾ.4 ರವರ ಪರಿಚಯ ಇಲ್ಲ, ಆದರೆ ನಮ್ಮ ಚಳುವಳಿಯ ಸ್ನೇಹಿತರೊಬ್ಬರು ಅವರಿಗೆ ನನ್ನ ಫೋನ್ ನಂಬರನ್ನು ಕೊಟ್ಟಿದ್ದರು. ಫ್ರಾಸಾ.4 ರವರು ನನಗೆ ಫೋನ್ ಮಾಡಿದ್ದು ದಿಃ 21-01-2025 ರಂದು ಬೆಳಿಗ್ಗೆ 7 ಗಂಟೆ ಸುಮಾರಿಗೆ. ಹಾಸನದಿಂದ ನಮ್ಮ ಊರಿಗೆ 22 ಕಿ.ಮೀ. ದೂರವಾಗುತ್ತದೆ. ಫ್ರಾಸಾ.4 ರವರು ನನಗೆ ಫೋನ್ ಮಾಡಿದಾಗ ನಾನು ಹಾಸನದಲ್ಲಿದ್ದೆನು. ಆ ದಿನ ನೀವು ನಿಮ್ಮ ಊರಿನಿಂದ ಅಲ್ಲಿಗೆ ಬಂದಿದ್ದೀರೆ ಎಂದರೆ ಸಾಕ್ಷಿ ಹಿಂದಿನ ದಿನ ರಾತ್ರಿ ಹಾಸನದಲ್ಲಿರುವ ನನ್ನ ಸ್ನೇಹಿತನ ಮನೆಯಲ್ಲೇ ಉಳಿದುಕೊಂಡಿದ್ದೆನು ಎನ್ನುತ್ತಾರೆ. ನಿಮ್ಮ ಸ್ನೇಹಿತನ ಹೆಸರೇನು

ಎಂದರೆ ಸಾಕ್ಷಿ ಬಸವರಾಜು ಎನ್ನುತ್ತಾರೆ. ಅವರ ಮನೆ ಎಲ್ಲಿದೆ ಎಂದರೆ ಸಾಕ್ಷಿ ಹಾಸನದ ಆರ್.ಟಿ.ಒ ಕಛೇರಿಯ ಹತ್ತಿರದಲ್ಲಿ ಎನ್ನುತ್ತಾರೆ. ಸದರಿ ಕಛೇರಿಯಿಂದ ಹಿಮ್ಸ್ ಆಸ್ಪತ್ರೆಗೆ ಸುಮಾರು ಒಂದು ಕಿ.ಮೀ ದೂರವಾಗುತ್ತದೆ. ಫ್ರಾಸಾ.4 ರವರು ಯಾವ ಮೊಬೈಲ್ ಸಂಖ್ಯೆಯಿಂದ ಕರೆ ಮಾಡಿದ್ದರು ಎಂದು ನಿಮ್ಮ ಹೇಳಿಕೆಯಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅವರ ಫೋನ್ ನಂಬರನ್ನು ತಿಳಿಸಲು ನಿಮಗೆ ಸಮಸ್ಯೆ ಇರಲಿಲ್ಲ ಎಂದರೆ ಸಾಕ್ಷಿ ಇರಲಿಲ್ಲ, ಆದರೆ ಯಾರು ಕೇಳಲಿಲ್ಲ ಎನ್ನುತ್ತಾರೆ.

7. ಫ್ರಾಸಾ.1 ರವರು ನನಗೆ ಹಿಮ್ಸ್ ಆಸ್ಪತ್ರೆಯಲ್ಲೇ ಪರಿಚಯವಾಗಿದ್ದು, ಹಿಂದೆ ಅವರ ಪರಿಚಯ ಇರಲಿಲ್ಲ. ಮೃತ ಶಾರದಳನ್ನು ಸಹ ನಾನು ಆಸ್ಪತ್ರೆಯಲ್ಲೇ ನೋಡಿದ್ದೇನೆ. ನಾನು ಈಗ್ಗೆ 25 ವರ್ಷಗಳಿಂದ ಸಾಮಾಜಿಕ ಚಳುವಳಿಯಲ್ಲಿ ತೊಡಗಿಕೊಂಡಿದ್ದೇನೆ. ನೀವು ಮತ್ತು ಫ್ರಾಸಾ.1 ರವರು ಒಂದೇ ಜನಾಂಗದವರು ಎಂದರೆ ಸಾಕ್ಷಿ ಅವರು ಯಾವ ಜನಾಂಗದವರು ಎಂದು ನನಗೆ ಗೊತ್ತಿಲ್ಲ, ನನ್ನ ಸ್ನೇಹಿತರ ಮೂಲಕ ಫ್ರಾಸಾ.4 ರವರು ಫೋನ್ ಮಾಡಿ ಕೇಳಿಕೊಂಡಿದ್ದರಿಂದ ನಾನು ಹೋಗಿದ್ದೇನೆ ಎನ್ನುತ್ತಾರೆ.

8. ಫ್ರಾಸಾ.1 ಮತ್ತು ಶಾರದ ಎಲ್ಲಿ ವಾಸವಾಗಿದ್ದರು, ಅವರ ಮನೆಯ ಸ್ಥಿತಿ ಹೇಗಿತ್ತು ಎಂದು ನನಗೆ ಗೊತ್ತಿಲ್ಲ. ಶಾರದ ಮೃತಪಟ್ಟ ಸಮಯದಲ್ಲಿ ಅವರ ಮನೆಯ ಮುಂದೆ ಚರಂಡಿಯನ್ನು ನಿರ್ಮಿಸಲು ಗುಂಡಿಯನ್ನು ತೊಡಲಾಗಿತ್ತು, ಓಡಾಡಲು ಜಾಗವಿರದೇ ಸಮಸ್ಯೆಯಾಗಿತ್ತು ಎಂದು ಫ್ರಾಸಾ.1 ರವರು ನಿಮಗೆ ತಿಳಿಸಿದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಶಾರದಳು ಚರಂಡಿ

ಮುಂದೆ ಬಿದ್ದು ಏಟು ಮಾಡಿಕೊಂಡಿದ್ದಳು ಎಂದರೆ ಸಾಕ್ಷಿ ಆ ವಿಚಾರವನ್ನು ಪ್ರಾಸಾ.1 ರವರು ನನಗೆ ಹೇಳಿಲ್ಲ ಎನ್ನುತ್ತಾರೆ.

9. ಪೊಲೀಸರು ಬರೆದುಕೊಂಡ ಹೇಳಿಕೆಗೆ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನೀವು ಹೇಳಿದಂತೆ ಹಿಮ್ಸ್ ಆಸ್ಪತ್ರೆಗೆ ಹೋಗಿಲ್ಲ ಮತ್ತು ಅಲ್ಲಿ ಶಾರದಳ ಶವವನ್ನು ನೋಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಲ್ಲಿನ ಸಿಸಿ ಕ್ಯಾಮೆರವನ್ನು ತೆಗೆಸಿ ನೋಡಿ ಎನ್ನುತ್ತಾರೆ. ಅಲ್ಲಿ ನಿಮ್ಮ ಫೋಟೋಗಳನ್ನು ಪೊಲೀಸರು ತೆಗೆದುಕೊಂಡರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

10. ನೀವು ಹೇಳಿದಂತೆ ಪ್ರಾಸಾ.4 ರವರು ನಿಮಗೆ ಫೋನ್ ಮಾಡಿಲ್ಲ, ಆ ರೀತಿ ಅವರು ನಿಮಗೆ ಫೋನ್ ಮಾಡಿದ್ದರೇ ನೀವು ಅವರ ಮೊಬೈಲ್ ಸಂಖ್ಯೆಯನ್ನು ನಿಮ್ಮ ಹೇಳಿಕೆಯಲ್ಲಿ ತಿಳಿಸುತ್ತಿದ್ದೀರಿ ಎಂದರೆ ಸಾಕ್ಷಿ ನೀವು ಹೇಳುವುದು ಸರಿಯಲ್ಲ, ಯಾರು ಕೇಳಿಲ್ಲ ಹಾಗಾಗಿ ಫೋನ್ ನಂಬರನ್ನು ಹೇಳಿಲ್ಲ ಎನ್ನುತ್ತಾರೆ. ಶಾರದಳಿಗೆ ಜನಿಸಿದ ಮಗುವನ್ನು ನಾನು ನೋಡಿಲ್ಲ. ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಶಾರದ ಸ್ವಾಭಾವಿಕವಾಗಿ ಮೃತಪಟ್ಟಿದ್ದು, ಆಕೆಯ ಸಾವಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸಾಕ್ಷಿ ನಾನು ಯಾವುದೇ ಘಟನೆಯನ್ನು ನೋಡಿಲ್ಲ, ಆದರೆ ಪ್ರಾಸಾ.1 ರವರು ಹೇಳಿದ ಮೇರೆಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎನ್ನುತ್ತಾರೆ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ